ದಿನಾಂಕ ಃ- 09-06-2023 ಓ ಎಸ ನಂ 12/2019

ಡಿ. ಡಬ್ಲ್ಯೂ – 1

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ

ಬೆಳಗಾವಿಯ ವಕೀಲರ ಬಳಿ ನಾನು, ವಾದಿಯರು ಹಾಗೂ ಸಿದ್ದನಗೌಡ ಪಾಟೀಲ ಅವರನ್ನು ಕರೆದುಕೊಂಡು ಹೋಗಿದ್ದೇನೆ. ವಕೀಲರನ್ನು ನ್ಯಾಯಾಲಯದಲ್ಲಿ ಭೇಟಿ ಮಾಡಿದೆವು. ನಾವೆಲ್ಲರೂ ಚಿದಂಬರ ನಾಯಕ ಎಂಬ ವಕೀಲರನ್ನು ಭೇಟಿ ಮಾಡಿದೆವು. ಸದರಿ ಬೆಳಗಾವಿಯ ವಕೀಲರ ಬಳಿ ಅಧಿಕಾರ ಪತ್ರವನ್ನು ಬರೆಸಲು ಹೋಗಿದ್ದೆವು. ಅಧಿಕಾರ ಪತ್ರವನ್ನು ವಾದಿಯರು ನನಗೆ ಸಾಗುವಳಿ ಮಾಡುವ ಸಲುವಾಗಿ ಮತ್ತು ಬ್ಯಾಂಕ ಸಾಲ ಪಡೆದುಕೊಳ್ಳುವ ಸಲುವಾಗಿ, ನ್ಯಾಯಾಲಯದ ಕೇಸಗಳನ್ನು ನೋಡಿಕೊಳ್ಳುವ ಸಲುವಾಗಿ ಹಾಗೂ ಖರೀದಿ ಕೊಡುವ ಸಲುವಾಗಿ ಬರೆಸುವ ಉದ್ದೇಶವನ್ನು ಹೊಂದಿದ್ದರು. ವಕೀಲರಿಗೆ ಅಧಿಕಾರ ಪತ್ರವನ್ನು ಬರೆಯಲು ಮಾಹಿತಿಯನ್ನು ಯಮನಪ್ಪ ನೀಡಿದರು. ಮೇಲೆ ಹೇಳಿದ ವಿಚಾರಗಳ ಬಗ್ಗೆ ಅಧಿಕಾರ ಪತ್ರವನ್ನು ಬರೆಯಲು ಯಮನಪ್ಪ ಮಾಹಿತಿ ನೀಡಿದನು. ನನಗೆ ದಾವಾ ಸ್ವತ್ತನ್ನು ಖರೀದಿಗೆ ಕೊಡಲು ಯಾವುಕಿದೇ ಅಧಿಕಾರವನ್ನು ವಾದಿಯರು ನೀಡಿಲ್ಲ ಎಂದರೆ ಸರಿಯಲ್ಲ ಬದಲಾಗಿ ಕೇವಲ ನ್ಯಾಯಾಲಯಕ್ಕೆ ಹಾಜರಾಗಿ ಕೇಸು ನಡೆಸಲು ಮಾತ್ರ ಅಧಿಕಾರ ಪತ್ರವನ್ನು ನೀಡಿರುವರು ಎಂದರೆ ಸರಿಯಲ್ಲ. ನನಗೆ ಸಿದ್ದವ್ವ ಎಂಬಾಕೆ ಯಾರು ಎಂದು ಮಾಹಿತಿ ಇರುವುದಿಲ್ಲ. ಸದರಿ ಸಿದ್ದವ್ವ ಎಂಬಾಕೆ 2010 ನೇ ಸಾಲನಲ್ಲಿ ಓ ಎಸ ನಂ 159/2010 ರಂತೆ ಘೋಷಣಾ ದಾವಾವನ್ನು ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ದಾಖಲು ಮಾಡಿದ್ದಳು ಎಂದರೆ ಸರಿ. ಬಾಳವ್ವ ಎಂಬಾಕೆ ನನ್ನ ತಂಗಿ ಎಂದರೆ ಸರಿ. ಬಾಳವ್ವನ ಮಕ್ಕಳು ಹಾಗೂ ಮೈದನಂದಿರು ಶಿಕ್ಷಣ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ಬಾಳವ್ವನ ಗಂಡ ಮೃತಪಟ್ಟ ನಂತರ ನಾನು ಅವರ ಮನೆಯ ಉಸ್ತುವಾರಿಯನ್ನು ನೋಡಿಕೊಂಡಿರುವುದಿಲ್ಲ. ನಾನು ಆಕೆಯ ಗಂಡ ಮೃತಪಟ್ಟ ನಂತರ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದೆ ಎಂದರೆ ಸರಿಯಲ್ಲ. ಆ ಕಾಲಕ್ಕೆ ಸಿವಿಲ ನ್ಯಾಯಾಲಯದಲ್ಲಿ ಹಾಗೂ ರೆವಿನ್ಯೂ ನ್ಯಾಯಾಲಯದಲ್ಲಿ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕೇಸುಗಳು ಇದ್ದವು ಎಂದರೆ ಸರಿ. ಸಿದ್ದವ್ವಳ ಅಣ್ಣತಮ್ಮಂದಿರು ಹಾಗೂ ಮಕ್ಕಳು ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಬಲಾಢ್ಯರಾಗಿದ್ದರು ಎಂದರೆ ಸರಿ. ಆ ಸಮಯದಲ್ಲಿ ಸುರೇಶರವರು ಕಿತ್ತೂರಿನ ಶಾಸಕರಾಗಿದ್ದರು. ನನಗೂ ಸದರಿ ಸುರೇಶರವರ ತಮ್ಮನಾದ ವಿರುಪಾಕ್ಷರವರಿಗೆ ಒಳ್ಳೆಯ ಸಂಬಂಧ ಇತ್ತು ಎಂದರೆ ಸರಿಯಲ್ಲ. ಆ ಕಾರಣದಿಂದ ನನ್ನ ಮೇಲೆ ನಂಬಿಕೆ ಮತ್ತು ವಿಶ್ವಾಸವನ್ನು ಇಟ್ಟು ಬಾಳವ್ವನ ಮಕ್ಕಳು ಹಾಗೂ ಮೈದನಂದಿರು ನನಗೆ ನ್ಯಾಯಾಲಯದಲ್ಲಿ ಕೇಸುಗಳನ್ನು ನಡೆಸಲು ಮಾತ್ರ ಅಧಿಕಾರ ಪತ್ರವನ್ನು ಕೊಟ್ಟಿದ್ದರು ಎಂದರೆ ಸರಿಯಲ್ಲ. ವಾದ ಪತ್ರದ ಪ್ಯಾರಾ ನಂ 3,

1 ನೇ ಸಾಲಿನಿಂದ 13 ನೇ ಸಾಲಿನವರೆಗೆ ಬರೆದಿರುವ ಎಲ್ಲಾ ವಿಚಾರಗಳನ್ನು ನಾನು ನನ್ನ ಪ್ರತಿವಾದ ಪತ್ರದಲ್ಲಿ ಒಪ್ಪಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದ ಪತ್ರದ ಪ್ಯಾರಾ ನಂ 7 ರಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಅಧಿಕಾರ ಪತ್ರವನ್ನು ಹುಟ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಅಧಿಕಾರ ಪತ್ರದ ಆಧಾರದ ಮೇಲೆ ಯಾವುದೇ ನ್ಯಾಯಾಲಯಕ್ಕೆ ಹಾಜರಾಗಿ ಕೇಸನ್ನು ನಡೆಸಿರುವುದಿಲ್ಲ ಎಂದರೆ ಸರಿಯಲ್ಲ ಬದಲಾಗಿ ನೇರವಾಗಿ ಖರೀದಿ ವ್ಯವಹಾರಕ್ಕೆ ಕೈಹಾಕಿದ್ದೇನೆ ಎಂದರೆ ಸರಿಯಲ್ಲ. ಅಧಿಕಾರ ಪತ್ರದ ಆಧಾರದ ಮೇಲೆ ಯಾವ ಕೇಸಿಗೆ ಹಾಜರಾಗಿ ಬಾಳವ್ವನ ಪರವಾಗಿ ಕೇಸನ್ನು ನಡೆಸಿರುವಿರಿ ಎಂಬ ಪ್ರಶ್ನೆಗೆ ಸಾಕ್ಷಿಯು ಸರಿಯಾದ ಉತ್ತರವನ್ನು ನೀಡಿರುವುದಿಲ್ಲ. ನಾನು ಬೆಳಗಾವಿ ವಕೀಲರು ಹಾಗೂ ಸಂಗನಗೌಡ ಪಾಟೀಲರು ಮಿಲಾಪಿಯಾಗಿ ಅಧಿಕಾರ ಪತ್ರವನ್ನು ಸುಳ್ಳಾಗಿ ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ಸದರಿ ಅಧಿಕಾರ ಪತ್ರದಲ್ಲಿ ಕೇಸಿಗೆ ಹಾಜರಾಗಿಲು ಮಾತ್ರ ಅಧಿಕಾರವನ್ನು ನೀಡಲಾಗಿದೆ ಎಂದು ನಾವು ವಾದಿಯರನ್ನು ಸುಳ್ಳು ಹೇಳಿ ನಂಬಿಸಿದ್ದೇವೆ ಎಂದರೆ ಸರಿಯಲ್ಲ. ಅಧಿಕಾರಿ ಪತ್ರಕ್ಕೆ ಸಿದ್ದವ್ವನ ಸಹಿ ಅವಶ್ಯಕತೆ ಇದ್ದರೂ ಸಹ ಉದ್ದೇಶಪೂರ್ವಕವಾಗಿ ಆಕೆಯನ್ನು ಹೊರಗಿಟ್ಟಿದ್ದೆವು ಎಂದರೆ ಸರಿಯಲ್ಲ.

ಅಧಿಕಾರ ಪತ್ರವನ್ನು ಪಡೆದುಕೊಂಡ ಒಂದು ವರ್ಷದ ನಂತರ ವಾದಿಯರ ಮನೆತನದ ಹಣದ ಅಡಚಣೆಯನ್ನು ನೀಗಿಸುವ ಸಲುವಾಗಿ ನಾನು ದಾವಾ ಸ್ವತ್ತನ್ನು ಮಾರಾಟ ಮಾಡಬೇಕೆಂದು ಆಲೋಚನೆ ಮಾಡಿದೆನು. ನಾನು ದಿಃ 22-09-2011 ರಂದು ಅಧಿಕಾರ ಪತ್ರವನ್ನು ಬರೆಸಿಕೊಂಡಿದ್ದೇನೆ. ಬಾಳವ್ವನ ಮನೆತನಕ್ಕೆ ರೂ. 2 ಲಕ್ಷದಷ್ಟು ಹಣಕಾಸಿನ ಅಡಚಣೆ ಇದ್ದ ಕಾರಣ ದಾವಾ ಸ್ವತ್ತನ್ನು ಮಾರಾಟ ಮಾಡಿದ್ದೇನೆ. ಆ ಕಾಲದಲ್ಲಿ ದಾವಾ ಸ್ವತ್ತಿಗೆ ಸಂಬಂದಿಸಿದಂತೆ ಸಿದ್ದವ್ವ ಮಾಡಿದ ದಾವೆ ಚಾಲ್ತಿಯಲ್ಲಿತ್ತು ಎಂದರೆ ಸರಿ. ಮಾರಾಟ ಮಾಡುವ ಕಾಲಕ್ಕೆ ನಾನು ದಾವಾ ಸ್ವತ್ತಿನ ಉತಾರವನ್ನು ಪರಿಶೀಲನೆ ಮಾಡಿದ್ದೇನೆ. ಉತಾರದಲ್ಲಿ 6 ಜನರ ಹೆಸರು ಇತ್ತು. ಯಮನಪ್ಪ , ಬಾಳಪ್ಪ, ಬಸಪ್ಪ, ಸದೆಪ್ಪ , ಸಾವಕ್ಕ , ಸಿದ್ದವ್ವ ಎಂಬುವವರ ಹೆಸರಿನಲ್ಲಿ ದಾವಾ ಸ್ವತ್ತಿನ ಉತಾರ ಇತ್ತು. ಸಿದ್ದವ್ವ ಎಂದರೆ ಹೊಲದ ಮೇಲೆ ದಾವೆ ಹಾಕಿದವರು ಎಂದರೆ ಸರಿ. ನಾನು ಅಧಿಕಾರ ಪತ್ರದ ಮೇಲೆ ದಿಃ 22-09-2011 ರಂದು ಸ್ಟ್ಯಾಂಪ ಡ್ಯುಟಿ ಕಟ್ಟಿರುವುದಿಲ್ಲ ಎಂದರೆ ಸರಿ, ನಾನು ಸ್ಟ್ಯಾಂಪ ಡ್ಯುಟಿಯನ್ನು 13-07-2012 ರಂದು ಕಟ್ಟಿದ್ದೇನೆ ಎಂದರೆ ಸರಿ. ಖರೀದಿ ಕಾಗದವನ್ನು ಮಾಡಿಕೊಡುವ ಸಲವಾಗಿ ದಿಃ 13-07-2011 ರಂದು ಅಧಿಕಾರ ಪತ್ರಕ್ಕೆ ಕಟ್ಟಬೇಕಾಗಿದ್ದ ಸ್ಟ್ಯಾಂಪ ಡ್ಯುಟಿ ಭರಣಾ ಮಾಡಿರುವೆನು. ಮುದ್ರಾಂಕ ಶುಲ್ಕ ಭರಣಾ ಮಾಡುವ ಕಾಲಕ್ಕೆ ವಾದಿಯರು ಕೂಡ ಬಂದಿದ್ದರು. ಆದರೆ ವಾದಿಯರು ಯಾವುದೇ ಸಹಿಯನ್ನು ಮಾಡಿರುವುದಿಲ್ಲ. ಖರೀದಿ ಪಡೆದುಕೊಳ್ಳುವ ಕಾಲಕ್ಕೆ ವಿರುಪಾಕ್ಷಪ್ಪ ಸಿದ್ಲಿಂಗಪ್ಪ ಮಾರಿಹಾಳ ಅವರು ಉತಾರವನ್ನು ನೋಡಿರುವರು. ಆ ಕಾಲಕ್ಕೆ ಉತಾರದಲ್ಲಿ ಸಿದ್ದವ್ವಳ ಹೆಸರು ಇತ್ತು ಎಂದರೆ ಸರಿ. ನಾನು ಆ

ವಿಚಾರವನ್ನು ವಿರುಪಾಕ್ಷಪ್ಪ ಸಿದ್ಲಿಂಗಪ್ಪ ಮಾರಿಹಾಳ ಅವರ ಗಮನಕ್ಕೆ ತಂದಿರುವೆನು. ಆಕೆ ದಾವೆ ಹಾಕಿರುವ ಬಗ್ಗೆ ವಿರುಪಾಕ್ಷಪ್ಪ ಸಿದ್ಲಿಂಗಪ್ಪ ಮಾರಿಹಾಳ ಅವರಿಗೆ ತಿಳಿಸಿರುವುದಿಲ್ಲ.

ಮುಂದುವರೆದ ಪಾಟೀ ಸವಾಲುಃ ಸಮಯ ಕೋರಿದ ಕಾರಣ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ.**

ಪ್ರ.ದಿ.ನ್ಯಾ ಮತ್ತು ಪ್ರ.ದ.ನ್ಯಾದಂ.ನ್ಯಾಬೈಲಹೊಂಗಲ